ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಯವರು 701 ಕೆಲಸಗಾರರನ್ನು ಕ್ರಮಗೊಳಿಸುವುದಕ್ಕೆ ಒಂದು ಸ್ಕ್ರೀನಿಂಗ್ ಕಮಿಟಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಈ ಸ್ಕ್ರೀನಿಂಗ್ ಕಮಿಟಿಯ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಇಂತಿಷ್ಟೇ ಕೋಟಾ ಕೊಡಬೇಕು, ಇಂಥವರಿಗೆ ರಕ್ಷಣೆ ಕೊಡಬೇಕೆಂದು ಏನಾದರೂ ಡೈರೆಕ್ಷನ್ಸ್ ಕೊಟ್ಟಿದ್ದೀರಾ ?

ಶ್ರೀ ಬಿ. ರಾಚಯ್ಯ.—ಟರ್ಮ್ಸ್ ಆಫ್ ರೆಫರೆನ್ಸ್ ಇಲ್ಲ.

Mr. SPEAKER.—Next question No. 297 but the hon'ble member is not here. Next question.

Payment of Compensation to the Persons affected due to Construction of Jaladigere Tank

334. Sri N. HUTCHMASTY GOWDA (Huliyurdurga).—

Will the Minister for Public Works be pleased to state :—

(*a*) when the estimate of Jaladigere tank in Kunigal taluk was prepared and sanctioned;

(*b*) the estimated cost of the same;

(*c*) the amount of expenditure incurred so far;

(*d*) the amount required for the completion of the said work;

(*e*) the amount of compensation to be given to the ryots whose lands will be submerged by the said tank;

(*f*) the arrangement made to give lands in lieu of the submerged lands;

(*g*) the stage at which the question of giving compensation and lands stands at present ?

Sri D. PARAMESWARAPPA (Deputy Minister for Major Irrigation and Electricity) [on behalf of Sri A. J. DODDAMETI (Minister of State for Minor Irrigation)].—

(*a*) Sanctioned in October 1959.

(*b*) Rs. 41,000

(*c*) Up to November 1968 an amount of Rs 55,915 has been spent.

(*d*) An amount of Rs. 43,000 is required to complete the remaining work.

(*e*) About Rs. 27,307.

(*f*) There are no lands near that village for being given to the ryots whose lands have been submerged.

(*g*) Acquisition proceeding are in progress.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ 1959 ನೇ ಇಸವಿಯಲ್ಲಿ ಈ ಕೆಲಸ ಮುಂಜೂರಾಗಿ ಪ್ರಾರಂಭವಾಯಿತು. ಎಷ್ಟು ವರ್ಷಗಳಲ್ಲಿ ಇದನ್ನು ಆಖ್ಯೆರು ಮಾಡಬೇಕೆಂದು ಯೋಚನೆಯಲ್ಲಿ ಇಟ್ಟುಕೊಂಡಿದೆ ಎಂಬುದನ್ನು ತಿಳಿಸಬೇಕು, ಮತ್ತು ಈಗ ಅಲ್ಲಿನ ರೈತರ ಜಮೀನು ಏನು ಮುಳುಗಡೆಯಾಗಿದೆಯೋ ಅದರ ಪಕ್ಕದಲ್ಲಿಯೇ ಬೇರೆ ಸರ್ಕಾರಿ ಜಮೀನು ಇದೆ. ಆದರೆ ಈಗ ಸರ್ಕಾರದವರು ಸತ್ಯಕ್ಕೆ ದೂರವಾದ ಸಮಾಚಾರವನ್ನು ಕೊಡುತ್ತಿದ್ದಾರೆ. ಅಲ್ಲಿ ಜಮೀನು ಮುಳುಗಡೆಯಾದ ರೈತರಿಗೆ ಬೇರೆ ಜಮೀನು ಕೊಡಬೇಕೆಂದು ಸರ್ಕಾರದವರು ಯೋಚನೆ ಮಾಡಿದ್ದೀರಾ ? ಮತ್ತು ಅದಷ್ಟು ಬೇಗ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

† Sri D. PARAMESWARAPPA.—The work is nearing completion. So far as grant of land to those whose lands come under submersion, is concerned it is reported that there is no land either in the village or nereby. If, according to my friend any land is available, it will be verified and action will be taken to grant the land.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಷ್ಟು ವರ್ಷಗಳಲ್ಲಿ ಆ ಕೆಲಸವನ್ನು ಆಖ್ಯೆರು ಮಾಡುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಿ, ಮತ್ತು 1969 ನೇ ಇಸವಿಯ ಆಖ್ಯೆರಿನೊಳಗಾಗಿ ಅದನ್ನು ಮಾಡುವ ಭರವಸೆಯನ್ನು ಕೊಡುತ್ತೀರಾ ?

Sri D. PARAMESWARAPPA.—I have said that the work is nearing completion.

Implementation of Agricultural Debtors Relief Act

427. Sri V. L. SHIVAPPA (Tiptur).—

Will the Minister for Development be pleased to state :—

the reasons for the delay in implementing the Agricultural Debtors Relief Act ?

Sri B. L. GOWDA (Deputy Minister for Co-operation).—

As the rules are yet to be finalised, the Act could not be brought into force so far. The rules are being published shortly.

ಶ್ರೀ ವಿ. ಎಲ್. ಶಿವಪ್ಪ.—ಸ್ವಾಮಿ, ವ್ಯವಸಾಯ ಸಾಲಗಾರರುಗಳಿಗೆ ಪರಿಹಾರ ನೀಡುವುದಕ್ಕೆ ಸಂಬಂಧಿಸಿದ ಶಾಸನವನ್ನು ಜಾರಿಗೊಳಿಸುವುದಕ್ಕೆ ನಿಯಮಗಳು ಇನ್ನೂ ಅಂತಿಮಗೊಳಿಸಬೇಕಾಗಿರುವುದರಿಂದ ಈ ಶಾಸನವನ್ನು ಈವರೆಗೆ ಜಾರಿಗೊಳಿಸಲಾಗಲಿಲ್ಲ ಎಂದು ಹೇಳಿದ್ದೀರಿ, ಸ್ವಾಭಾವಿಕವಾಗಿ ನುಮಾರು 1½ ಕೋಟಿ ಜನಗಳಿಗೆ ಇದರಿಂದ ಅನುಕೂಲವಾಗುತ್ತದೆ. ಈ ಕಾನೂನು ಈ ಸಭೆಯಲ್ಲಿ 1966ನೇ ಇಸವಿಯಲ್ಲಿ ಪಾಸಾಯಿತು, ಇದನ್ನು ಇನ್ನೂ ಜಾರಿಗೆ ತಂದಿಲ್ಲ. ಇದನ್ನು ಜಾರಿಗೆ ತಂದರೆ ಇದರಿಂದ ಶ್ರೀಮಂತರಿಗೆ ಅನಾನುಕೂಲವಾಗುತ್ತದೆ ಎನ್ನುವ ಉದ್ದೇಶದಿಂದ ಇದನ್ನು ವಿಳಂಬ ಮಾಡಿದ್ದಾರೆ ಎನ್ನುವ ಕಾರಣ ಗೊತ್ತಾಗುತ್ತದೆ. ಆದ್ದರಿಂದ ಈಗಲಾದರೂ ಇದರ ನಿಯಮಗಳನ್ನು ಜಾಗ್ರತೆ ತಯಾರು ಮಾಡಿ ಜಾರಿಗೆ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಬಿ. ಎಲ್. ಗೌಡ.—ಅದನ್ನು ಪ್ರಿಂಟಿಂಗ್ ಪ್ರೆಸ್ಸಿಗೆ ಕಳುಹಿಸಿಕೊಟ್ಟಿದ್ದೇವೆ. ಅದು ಪ್ರಿಂಟ್ ಆಗಿ ಪಬ್ಲಿಷ್ ಆದಕೂಡಲೇ ಅದನ್ನು ಜಾರಿಗೆ ಕೊಡುತ್ತೇವೆ.

† Indicates that the speeches or remarks have not b en revised by the member concerned.